ಅವನು ಚಿತ್ರವನ್ನಂತೂ ಬರೆಯುತ್ತಿದ್ದ, ಆದರೆ ಯಾವ ಚಿತ್ರ ಬರೆಯಲು ಕುಳಿತಿದ್ದನೋ, ಅವನಿಗೇ ತಿಳಿದಿರಲಿಲ್ಲ! ಅವನ ಕಣ್ಣುಗಳೆದುರು ಮಸುಕು-ಮಸುಕು. ಮಸುಕಿನಲ್ಲಿ ಚಿತ್ರವನ್ನು ಹುಡುಕಲು ಪ್ರಯತ್ನಿಸುತ್ತಿದ್ದ.

ಬಾಗಿಲನ್ನು ತಟ್ಟಿದ ಸದ್ದು.

ಬಾಗಿಲು ತೆರೆದಾಗ ಎದುರಿಗೆ ನೋಡುತ್ತಾನೆ: ಧರ್ಮದ ಮೂರ್ತಿಯಂತಿದ್ದ ಶಂಕರಾಚಾರ್ಯರು ನಿಂತಿದ್ದಾರೆ!

ಅವನು ಅವರನ್ನು ಸ್ವಾಗತಿಸುತ್ತಾ ಒಳಗೆ ಕರೆ ತರುತ್ತಾನೆ. ನಂತರ ಹಲಗೆಯ ಪಕ್ಕದಲ್ಲಿದ್ದ ಕುರ್ಚಿಯಲ್ಲಿ ಕೂರಿಸುತ್ತಾನೆ.

'ಕ್ಷಮಿಸಿ, ನಾನು ನಿಮ್ಮ ಬಳಿ ಒಂದು ಕೆಲಸಕ್ಕಾಗಿ ಬಂದಿದ್ದೆ. ನನಗೊಂದು ಚಿತ್ರವನ್ನು ಬರೆದು ಕೊಡಿ. ಹಂಸದ ಚಿತ್ರ.'

'ಹಂಸದ ಚಿತ್ರ?'

'ಹೌದು,' ಶಂಕರಾಚಾರ್ಯರು ಹೇಳಿದರು, 'ಶುಭ್ರ ವರ್ಣದ ಹಂಸ, ರಕ್ತ ವರ್ಣದ ಹಂಸವಲ್ಲ. ಮುತ್ತನ್ನು ಆರಿಸಿ ತಿನ್ನುವ ಹಂಸ... ರಾಜಕೀಯ, ಅರ್ಥಶಾಸ್ತ್ರ ಮತ್ತು ಧರ್ಮಶಾಸ್ತ್ರವನ್ನು ಹೊರತುಪಡಿಸಿ ನೀತಿಯನ್ನು ಆರಿಸಿ ತಿನ್ನುವ ಹಂಸ. ಹಾಲು-ನೀರಿನಲ್ಲಿ ಹಾಲನ್ನು ಕುಡಿಯುವ ಹಂಸ!'

'ಆದರೆ ನೀವೇ ಇಂಥ ಹಂಸವನ್ನು ಪ್ರಸ್ತುತ ಪಡಿಸುತ್ತಿರುತ್ತೀರಾ. ಕಬೀರರು ಪ್ರಸ್ತುತ ಪಡಿಸಿದರು, ನಾನಕರು ಪ್ರಸ್ತುತ ಪಡಿಸಿದರು, ಸ್ವಾಮಿ ವಿವೇಕಾನಂದರು ಪ್ರಸ್ತುತ ಪಡಿಸಿದರು.'

'ಹೌದು, ಪ್ರಸ್ತುತ ಪಡಿಸಿದರು. ಆದರೆ ಪ್ರಜಾಪ್ರಭುತ್ವದಲ್ಲಿ ಇದನ್ನು ಜನರ ಕೈಯಲ್ಲೇ ಪ್ರಸ್ತುತಗೊಳಿಸಲು ಬಿಡಬೇಕು. ಜನರಿಗೆ ನಮ್ಮ ಬ್ರಶ್‌ಗಳಲ್ಲಿ ಸಾಂಪ್ರದಾಯಿಕತೆಯ ಬಣ್ಣಗಳೇ ಕಾಣ ಬರುತ್ತವೆ. ನಮ್ಮ ಹಂಸಗಳಲ್ಲಿ ಕಾಗೆಗಳೇ ಕಾಣ ಬರುತ್ತವೆ.'

'ನೀವೇನು ತಗೋಳ್ತೀರಾ, ಕಾಫಿ ಅಥವಾ ಚಹಾ? ಹಾಲು ನನ್ನ ಬಳಿ ಇಲ್ಲ' ಎಂದ ಚಿತ್ರಕಾರ.

'ನನಗೆ ಗೊತ್ತಿದೆ...ಹಾಲು ಶುಭ್ರವಾಗಿರುತ್ತದೆ. ವಿಡಂಬನೆ ಎಂದರೆ ಶುಭ್ರವೇ ಹಾಲಿನಿಂದ ವಂಚಿತವಾಗಿ ಉಳಿದಿರುತ್ತದೆ. ನೀವು ನನಗೆ ನೀರು ಮಾತ್ರ ಕೊಡಿ.'

'ಆದರೆ ನನ್ನ ವರ್ಣ...'

'ಕಲೆಗೆ, ಶ್ರಮಕ್ಕೆ, ಗುಣಕ್ಕೆ ಮತ್ತು ನ್ಯಾಯಕ್ಕೆ ಯಾವುದೇ ವರ್ಣವಿರುವುದಿಲ್ಲ. ಇವುಗಳಿಗೆ ಉಚ್ಚ ವರ್ಣವೇ ಇರುತ್ತವೆ. ನಮಗೆ ಬೇಕಾದ ಉಚ್ಚ ವರ್ಣ, ಇವುಗಳ ವರ್ಣವೇ ಆಗಿದೆ. ಇವುಗಳಿಂದ ವಿಹೀನವಾಗಿರುವುದು ಶೂದ್ರ ವರ್ಣ.'

ಚಿತ್ರಕಾರ ಶಂಕರಾಚಾರ್ಯರಿಗೆ ಹಂಸದ ಚಿತ್ರವನ್ನು ಬರೆದುಕೊಟ್ಟ.

ಶಂಕರಾಚಾರ್ಯರು ತುಂಬಾ ಖುಷಿಯಿಂದ ಅಲ್ಲಿಂದ ಹೊರಟು ಹೋದರು.

ಅವನು ಚಿತ್ರವನ್ನು ಬರೆಯುತ್ತಿದ್ದ. ಆದರೆ ಯಾವ ಚಿತ್ರ ಬರೆಯಲು ಕುಳಿತಿದ್ದನೋ, ಅವನಿಗೇ ತಿಳಿದಿರಲಿಲ್ಲ! ಅವನ ಕಣ್ಣುಗಳೆದುರು ಮಸುಕು-ಮಸುಕು. ಮಸುಕಿನಲ್ಲಿ ಚಿತ್ರವನ್ನು ಹುಡುಕಲು ಪ್ರಯತ್ನಿಸುತ್ತಿದ್ದ.

ಬಾಗಿಲನ್ನು ತಟ್ಟಿದ ಸದ್ದು.

ಅವನು ಎದ್ದು ಬಾಗಿಲನ್ನು ತೆರೆದಾಗ ಎದುರಿಗೆ ನೋಡುತ್ತಾನೆ: ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ಮುಖಂಡರಾದ ನೆಲ್ಸನ್ ಮಂಡೇಲಾ ನಿಂತಿದ್ದಾರೆ!

ಅವನು ಅವರನ್ನು ಸ್ವಾಗತಿಸುತ್ತಾ ಒಳಗೆ ಕರೆತರುತ್ತಾನೆ. ನಂತರ ಹಲಗೆಯ ಪಕ್ಕದಲ್ಲಿದ್ದ ಕುರ್ಚಿಯಲ್ಲಿ ಕೂರಿಸುತ್ತಾನೆ.

'ಬ್ರದರ್, ನಾನು ಅರ್ಜೆಂಟ್‌ನಲ್ಲಿದ್ದೇನೆ! ನಾನು ಇದೇ ತಿಂಗಳು (ಫೆಬ್ರವರಿ, 1990) ಎಷ್ಟೋ ವರ್ಷಗಳ ನಂತರ ಜೈಲಿನಿಂದ ಬಿಡುಗಡೆಯಾಗಿದ್ದೇನೆ ಎಂಬುವುದು ನಿನಗೆ ಗೊತ್ತಿದೆ. ನನಗೆ ಸಿಕ್ಕಾಪಟ್ಟೆ ಕೆಲಸಗಳಿವೆ. ನೀವು ನನಗಾಗಿ ಒಂದು ಚಿತ್ರವನ್ನು ಬರೆದುಕೊಡಿ. ಒಂದು ಕೋಗಿಲೆಯ ಚಿತ್ರ' ಮಂಡೇಲಾ ಹೇಳಿದರು.

'ಕೋಗಿಲೆಯ ಚಿತ್ರ!' ಚಿತ್ರಕಾರನ ಬಾಯಿಯಿಂದ ಅನಾಯಾಸವಾಗಿ ಈ ಮಾತು ಹೊರಟಿತು.

'ಹೌದು,' ಮಂಡೇಲಾ ಹೇಳಿದರು, 'ಕೋಗಿಲೆಯ ಚಿತ್ರ... ಕಪ್ಪು ಕೋಗಿಲೆಯ ಚಿತ್ರ, ಇವುಗಳನ್ನು ಇದುವರೆಗೆ ಬಿಳಿ ಚರ್ಮದ ಹಂಸಗಳು ಕಾಗೆ ಎಂದು ತಿಳಿದಿದ್ದವಲ್ಲ...'

'ಕಲಾಕಾರ. ನಿನಗೆ ಗೊತ್ತೇ ಇದೆ, ರಾಜಕೀಯದಲ್ಲಿ